159ಪ್ರ
94

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚಿದಾನಂದ ಎಂ ಗೌಡ ರವರು ನಿಯಮ 72ರಡಿ ಗಮನ ಸೆಳೆದಿರುವ ಸೂಚನೆಗೆ ಸರ್ಕಾರದ ಹೇಳಿಕೆ:-**

**ಸೂಚನೆ:**

"ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಉತ್ತರ ತಾಲ್ಲೂಕು, ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ.50/1 ರಲ್ಲಿ ಆಕಾರ್ ಬಂದ್ ನಂತೆ ವಿಸ್ತೀರ್ಣವನ್ನು ಪಹಣಿಯ ಕಾಲಂ ನಂ-3 ಮತ್ತು 9 ಕ್ಕೆ ತಾಳೆ ಮಾಡಲು ರೈತರು ತಹಸೀಲ್ದಾರರಿಗೆ ಅರ್ಜಿ ಸಲ್ಲಿಸಿ ಎಷ್ಟು ದಿನಗಳು ಕಳೆದಿವೆ" ಒಂದು ಅರ್ಜಿ ಸಲ್ಲಿಕೆಯಾಗಿ ಸುಮಾರು ಹತ್ತು ತಿಂಗಳೇ ಕಳೆದರು ಕ್ರಮ ಕೈಗೊಳ್ಳದೆ ಇರಲು ಸೂಕ್ತವಾದ ಕಾರಣಗಳು ಇವೆಯೇ ಇದ್ದರೆ, ಅರ್ಜಿದಾರರಿಗೆ ಇದರ ಬಗ್ಗೆ ಲಿಖಿತವಾಗಿ ಹಿಂಬರಹ ನೀಡಿದ್ದರೆ ಪ್ರತಿಯನ್ನು ನೀಡುವುದು. ಸದರಿ ಅರ್ಜಿ ಸಲ್ಲಿಕೆಯಾದ ನಂತರ ಯಾವ ಅಧಿಕಾರಿಗಳ ಲಾಗಿನ್ ನಲ್ಲಿ ಎಷ್ಟು ದಿನಗಳು ಇವೆ ಎಂಬುದನ್ನು ಪರಿಶೀಲಿಸಿ ವಿವರ ನೀಡುವುದು. ರೈತರು ತಾವಾಗಿಯೇ ತಮ್ಮ ಖಾತೆಯಲ್ಲಿ ಸೇರಿರುವ ಖರಾಬು ಭೂಮಿಯನ್ನು ಸರ್ಕಾರಕ್ಕೆ ಬಿಟ್ಟುಕೊಡಲು ಅರ್ಜಿ ಸಲ್ಲಿಸಿ ಅಧಿಕಾರಿಗಳು ವರದಿ ಸಲ್ಲಿಸಿದ್ದರೂ ಹತ್ತು ತಿಂಗಳಾದರೂ ಸದರಿ ಅರ್ಜಿಯನ್ನು ಬಾಕಿಯಿಟ್ಟುಕೊಂಡಿರುವ ಕಾರಣಗಳನ್ನು ತಿಳಿಸಿ. ಖರಾಬು ಸೇರಿಸಿ ಅಧಿಕಾರಿಗಳು ಖಾತೆಯನ್ನು ಮಾಡುವ ಉದ್ದೇಶವೇನು; ರೈತರು ತಿದ್ದುಪಡಿಗಾಗಿ ಅಲೆಯಲು ಎಂದೇ ? ಈ ರೀತಿಯ ಅನಗತ್ಯ ವಿಳಂಬ ಮಾಡುವ ಅಧಿಕಾರಿಗಳ ಮೇಲೆ ಪ್ರಜಾಸೇವಾ ಇಲಾಖೆ/ಕಂದಾಯ ಇಲಾಖೆ ಕೈಗೊಳ್ಳುವ ಕ್ರಮವೇನು? ಸದರಿ ಅರ್ಜಿಯನ್ನು ಕೂಡಲೇ ಇತ್ಯರ್ಥ ಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು? ಅಧಿಕಾರಿಗಳು ಅನಗತ್ಯವಾಗಿ ಪಹಣಿ ತಿದ್ದುಪಡಿಯನ್ನು ವಿಳಂಭ ಮಾಡಿ ರೈತರಿಗೆ ತೊಂದರೆ ನೀಡುತ್ತಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಹೇಳಿಕೆ:**

ಸದರಿ ವಿಷಯವು ಸರ್ಕಾರದ ಗಮನಕ್ಕೆ ಬಂದಿದ್ದು, ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಹಾಗೂ ಕರ್ನಾಟಕ ಭೂ ಕಂದಾಯ ನಿಯಮಗಳು, 1966 ರ ಅನ್ವಯ ಭೂ ದಾಖಲೆಗಳನ್ನು ನಿಖರವಾಗಿ ನಿರ್ವಹಿಸಿ, ದಾಖಲೆಗಳಲ್ಲಿನ ವ್ಯತ್ಯಾಸಗಳನ್ನು ನಿಯಮಾನುಸಾರ ಪರಿಶೀಲಿಸಿ ತಿದ್ದುಪಡಿ ಮಾಡುವುದು ಸಂಬಂಧಪಟ್ಟ ಕಂದಾಯ ಅಧಿಕಾರಿಗಳ ಕರ್ತವ್ಯವಾಗಿದೆ. ಪಹಣಿ ಸಂಬಂಧಿತ ತಿದ್ದುಪಡಿಗಳನ್ನು ಅನಗತ್ಯವಾಗಿ ವಿಳಂಬಿಸುವುದು ಸಮರ್ಥನೀಯವಲ್ಲ.

ಪಹಣಿ ತಿದ್ದುಪಡಿಯ ಸ್ವರೂಪಕ್ಕೆ ಅನುಗುಣವಾಗಿ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಕಲಂ 127, 128 ಮತ್ತು 129 ಹಾಗೂ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 70ರನ್ವಯ ಸಂಬಂಧಪಟ್ಟ ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿ ರವರ ಅಧಿಕಾರ ವ್ಯಾಪ್ತಿಯಲ್ಲಿ ಕ್ರಮ ಕೈಗೊಳ್ಳಬೇಕಾಗುತ್ತದೆ.

ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ.50/1 ರ ಅರ್ಜಿಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಕೆಯ ದಿನಾಂಕದಿಂದ ಇದುವರೆಗೆ ಯಾವ ಯಾವ ಅಧಿಕಾರಿಗಳ ಲಾಗಿನ್‌ನಲ್ಲಿ ಎಷ್ಟು ದಿನ ಅರ್ಜಿ ಬಾಕಿಯಿತ್ತು ವಿಳಂಬಕ್ಕೆ ಕಾರಣವೇನು ಹಾಗೂ ಅರ್ಜಿದಾರರಿಗೆ ಲಿಖಿತ ಹಿಂಬರಹ ನೀಡಲಾಗಿದೆಯೇ ಎಂಬುದನ್ನು ಪರಿಶೀಲಿಸಿ ವರದಿ ಪಡೆಯಲಾಗುವುದು.

ಅದೇ ರೀತಿ, ಖಾತೆಯಲ್ಲಿ ನಮೂದಾಗಿರುವ ಖರಾಬು ಭೂಮಿಯನ್ನು ಸರ್ಕಾರಕ್ಕೆ ಬಿಟ್ಟುಕೊಡುವ ಕುರಿತು ಸಲ್ಲಿಸಿರುವ ಅರ್ಜಿ ಮತ್ತು ಅಧಿಕಾರಿಗಳ ವರದಿಯನ್ನು ಪರಿಶೀಲಿಸಿ, ದಾಖಲೆಗಳ ಆಧಾರದ ಮೇಲೆ ಕಾನೂನುಬದ್ಧವಾಗಿ ತೀರ್ಮಾನ ಕೈಗೊಳ್ಳಲಾಗುವುದು. ಯಾವುದೇ ಕಾನೂನುಬದ್ಧ ಕಾರಣವಿಲ್ಲದೆ ಅರ್ಜಿಯನ್ನು ದೀರ್ಘಕಾಲ ಬಾಕಿ ಇರಿಸಿರುವುದು ದೃಢಪಟ್ಟಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯ ಲೋಪ/ನಿರ್ಲಕ್ಷ್ಯಕ್ಕೆ ಹೊಣೆಗಾರಿಕೆ ನಿಗದಿಪಡಿಸಲಾಗುವುದು.

ಸದರಿ ಅರ್ಜಿಯನ್ನು ಎಲ್ಲಾ ಮೂಲ ದಾಖಲೆಗಳೊಂದಿಗೆ ತ್ವರಿತವಾಗಿ ಪರಿಶೀಲಿಸಿ ಕಾನೂನು ಮತ್ತು ನಿಯಮಾನುಸಾರ ಕಾಲಮಿತಿಯೊಳಗೆ ಅಂತಿಮವಾಗಿ ವಿಲೇವಾರಿ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಲಾಗುವುದು. ರೈತರು ದಾಖಲೆ ತಿದ್ದುಪಡಿಗಾಗಿ ಅನಗತ್ಯವಾಗಿ ಕಛೇರಿಗಳಿಗೆ ಅಲೆದಾಡುವ ಪರಿಸ್ಥಿತಿ ಉಂಟಾಗದಂತೆ ಸೂಕ್ತ ಮೇಲ್ವಿಚಾರಣಾ ಕ್ರಮಗಳನ್ನು ಕೈಗೊಳ್ಳಲಾಗುವುದು.

**ಸಂಖ್ಯೆ:RD 282 MRR 2026**

**(ಡಾ.ಜಿ.ಪರಮೇಶ್ವರ)**
ಉಪ ಮುಖ್ಯಮಂತ್ರಿ,
ಕಂದಾಯ ಮತ್ತು ಕ್ರೀಡಾ ಸಚಿವರು